ಶ್ರೀ ಆರ್. ಎನ್. ಲಕ್ಷ್ಮೀಪತಿ.—ಅನೇಕ ಸಮಿತಿಗಳನ್ನು ಮಾಡಿ, ಆ ಸಮಿತಿಗಳಿಂದ ಬೇತ ಉದ್ಧಾರವಾಯಿತು ಎಂದು ತಿಳಿದುಕೊಂಡಿದ್ದೀರಿ. ಸಿ. ಡಿ. ಬ್ಲಾಕುಗಳು ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಲಗಳ ವಿಚಾರದಲ್ಲಿ ರಿಯಲಿಸ್ಟಿಕ್ ಆಗಿ ಇರುವ ಪ್ರಾಬ್ಲಂಗಳನ್ನು ಅಪ್ರೋಚ್ ಮಾಡುವುದಕ್ಕೆ ದೇವರು ನಿಮಗೆ ಸದ್ಬುದ್ಧಿ ಕೊಡಲಿ ಎಂದು ಹೇಳೋಣವೇ, ಸ್ವಾಮಿ ?

Mr. SPEAKER.—It is disallowed.

ಶ್ರೀ ಚಿಕ್ಕೇಗೌಡ.—ಮುದರಾಸು ಪ್ರಾಂತದಲ್ಲಿ ತಾಲ್ಲೂಕುಬೋರ್ಡುಗಳನ್ನು ತೆಗೆದಿದ್ದಾರೆಂದು ಸದಸ್ಯರೊಬ್ಬರು ಹೇಳಿದ್ದು ನಿಜವೇ ?

ಶ್ರೀ ಪಿ. ಎಂ. ನಾಡಗೌಡ.—ಅದು ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಚಿಕ್ಕೇಗೌಡ.—ಕೊಂಡಜ್ಜಿ ಬಸಪ್ಪ ಕಮಿಟಿಯವರ ಶಿಫಾರಸಿನಂತೆ ಪಂಚಾಯಿತಿ ರಾಜ್ಯದ ಬಿಲ್ಲನ್ನು ತರಲು ಯೋಜನೆ ಮಾಡಿದ್ದೀರಾ ?

ಶ್ರೀ ಪಿ. ಎಂ. ನಾಡಗೌಡ.—ಆ ವಿಚಾರವನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ.

ಶ್ರೀ ಎಸ್. ಪುಟ್ಟಸ್ವಾಮಿ.—ಹಿಂದೆ ತಾಲ್ಲೂಕು ಬೋರ್ಡಿನಲ್ಲಿದ್ದಾಗ ಒಬ್ಬ ಅಧಿಕಾರಿಗಳು ಆ ಕೆಲಸವನ್ನು ನೋಡಿಕೊಳ್ಳುತ್ತಿದ್ದರು. ಈಗ ತಾಲ್ಲೂಕು ಬೋರ್ಡಿನಲ್ಲಿ ಕಂಬ ಕಂಬಕ್ಕೆ ಒಬ್ಬ ಅಧಿಕಾರಿಗಳಿದ್ದಾರೆ. ಅವರಿಗೇನೂ ಕೆಲಸವಿಲ್ಲದೆ ಹಾಯಾಗಿ 30 ದಿವಸ ಎಣಿಸಿ ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ಈ ಇಲಾಖೆಯನ್ನು ತೆಗೆದು ಹಿಂದಿದ್ದಹಾಗೆ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಪಿ. ಎಂ. ನಾಡಗೌಡ.—ಆಗುವುದಿಲ್ಲ, ಅಲ್ಲಿ ಕೆಲಸ ಕಾರ್ಯ ಸಾಕಷ್ಟಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ನೋಡಿದಂತೆ ನಮ್ಮ ಕಡೆ ಬ್ಲಾಕಿನಲ್ಲಿ ಇರುವ ಅಧಿಕಾರಿಗಳಿಗೆ ಸಾಕಷ್ಟು ಕೆಲಸವಿಲ್ಲ, ಕೆಲಸಮಾಡಲು ಹಣವಿಲ್ಲ. ಆದ್ದರಿಂದ ಆ ಅಧಿಕಾರಿಗಳನ್ನು ಬೇರೆ ಕಡೆಗೆ ಹಾಕಿ ಕೆಲಸ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೇ ?

ಶ್ರೀ ಪಿ. ಎಂ. ನಾಡಗೌಡ.—ನಮಗೆ ಬಂದಿರುವ ವರದಿ ಪ್ರಕಾರ ಅಲ್ಲಿ ಸಾಕಷ್ಟು ಕೆಲಸ ಇದೆ. ಅಲ್ಲಿನವರನ್ನು ತೆಗೆದರೆ ಬಹಳ ಕಠಿನವಾಗಬಹುದು.

ಶ್ರೀ ಎಸ್. ಶಿವಪ್ಪ.—ಪಂಚಾಯಿತಿ ರಾಜ್ಯ ಬಂದಮೇಲೆ ಹಳ್ಳಿಗಳಲ್ಲಿ ಒಗ್ಗಟ್ಟಿಗೆ ಬದಲು ಪಾರ್ಟಿಗಳಾಗಿ ತೊಂದರೆಯಾಗುತ್ತಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಬಂದಿಲ್ಲ. ಒಗ್ಗಟ್ಟಿಗೆ ಅದರಿಂದ ಅನುಕೂಲವಾಗಬಹುದು ಎಂಬುದು ನಮ್ಮ ಭಾವನೆ.

Mr. SPEAKER.—Question Hour is over. Now Short Notice Question No. 40.

SHORT NOTICE QUESTION

Priority to Major and Medium Irrigation Projects

Q.—40. Sri H. C. LINGA REDDY (Malur).—

Will the Minister for Public Works be pleased to state :—

(*a*) whether it is a fact that the Government has decided to give priority to Major and Medium Irrigation Projects in preference to Minor Irrigation works from this year onwards ;

(*b*) if so, the reasons thereof ;

(*c*) whether it is a fact that minor irrigation works would yield quick results at lower costs ;

(*d*) the policy of the Government as regards minor irrigation works in the annual and fourth plan of the State ?

A.—Sri VEERENDRA PATIL (Minister for Public Works)
(*a*) No.
(*b*), (*c*) and (*d*) Does not arise.

Sri H. C. LINGA REDDY.—From the answer given may I take it that the Government are going to give priority to minor irrigation works in preference to medium and major irrigation works; if so, what is the action taken ?

Sri VEERENDRA PATIL —We have not said that we are going to give priority to minor irrigation works in preference to medium and major irrigation works. At the same time it is not the policy of Government to give preference to medium and major Irrigation works in preference to minor irrigation works.

Sri H. C. LINGA REDDY.—In that case, may I know the reason why Engineers including the Chief Engineer are divested of the power of sanctioning works of tanks and the powers are vested with the Government only at present ?

Sri VEERENDRA PATIL.—We have started a number of works. Thousands of works are in progress and so there is no point in starting more works when we have got limited funds. That is why we are thinking twice before starting a work.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಮೇಜರ್ ಮತ್ತು ಮಿಡಿಯಂ ಪ್ರಾಜೆಕ್ಟುಗಳಿಗಿಂತ ಮೈನರ್ ಇರಿಗೇಷನ್ ಕೆಲಸಗಳನ್ನು ಹೆಚ್ಚಾಗಿ ತೆಗೆದುಕೊಂಡರೆ ಜಾಗ್ರತೆ ಕೆಲಸವಾಗಿ ಪ್ರತಿಫಲ ಬರುತ್ತದೆ. ಆದುದರಿಂದ ಮೈನರ್ ಕೆಲಸಗಳಿಗೆ ಹೆಚ್ಚು ಆದ್ಯತೆ ಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಮೈನರ್ ಇರಿಗೇಷನ್ ಕೆಲಸದ ವಿಷಯವೇ ಬೇರೆ. ಆ ಕೆಲಸವನ್ನು ಮಿಡಿಯಂ ಮತ್ತು ಮೇಜರ್ ಕೆಲಸಗಳ ಸಲುವಾಗಿ ಹೋಲಿಕೆಮಾಡುವುದಿಲ್ಲ. ಆದರೆ ಮೈನರ್ ಕೆಲಸಗಳಿಗೆ ಹೆಚ್ಚು ಆದ್ಯತೆ ಕೊಡುವುದಕ್ಕಾಗುವುದಿಲ್ಲ. ಮಾನ್‌ಸೂನ್ ಸರಿಯಾಗಿ ಬರುವುದಿಲ್ಲ. ಮಳೆ ಸರಿಯಾಗಿ ಆಗದಿದ್ದರೆ ತೊಂದರೆಯಾಗುವುದು. ಸದಾಕಾಲ ನೀರಿನ ಅನುಕೂಲವಿರಬೇಕಾದರೆ ಮಿಡಿಯಂ ಮತ್ತು ಮೇಜರ್ ಇರಿಗೇಷನ್ ಹೆಚ್ಚಾಗಿ ಮಾಡಬೇಕು.

ಶ್ರೀ ಜಿ. ರಾಮೇಗೌಡ.—ಈ ಸಾಲಿನಲ್ಲಿ ಸಣ್ಣ ನೀರಾವರಿ ಯೋಜನೆ ಬಗ್ಗೆ ಹಣ ಕೊಟ್ಟಿದ್ದೀರಾ ! ಇಂಥ ಕೆಲಸ ತೆಗೆದುಕೊಳ್ಳಬಾರದು ಎಂದು ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ಹಾಗೇನೂ ಇಲ್ಲ. ಈ ಸಲ ಬಜೆಟ್ಟಿನಲ್ಲಿ ಮೈನರ್ ಇರಿಗೇಷನ್ನಿಗೆ 470 ಲಕ್ಷ ರೂಪಾಯಿ ಇಟ್ಟಿದೆ. ಈ ಬಜೆಟ್ ಅಂಗೀಕಾರವಾದಮೇಲೆ ಎಷ್ಟೋ ಸ್ಪಿಲ್‌ಓವರ್ ಕೆಲಸಗಳಿಗೆ ಹಣ ಬೇಕು. ಹೊಸ ಕೆಲಸ ತೆಗೆದುಕೊಳ್ಳುವುದಕ್ಕೆ ಅವಕಾಶವಿದ್ದರೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀ ಎಸ್. ಶಿವಪ್ಪ.—ಹೊಸ ಕೆಲಸ ತೆಗೆದುಕೊಳ್ಳುವುದಕ್ಕೆ ಎಂಜಿನಿಯರುಗಳಿಗೆ ಅನುಮತಿ ಕೊಟ್ಟಿದ್ದೀರಾ ? ಅಥವಾ ನೇರವಾಗಿ ಸರಕಾರವೇ ತೀರ್ಮಾನಮಾಡುತ್ತದೆಯೋ ?

ಶ್ರೀ ವೀರೇಂದ್ರ ಪಾಟೀಲ್.—ಹೊಸ ಕೆಲಸ ಎಷ್ಟು ತೆಗೆದುಕೊಳ್ಳಬೇಕೆಂಬುದನ್ನು ನಾವೇ ತೀರ್ಮಾನಮಾಡುತ್ತೇವೆ. ಆದಾದಮೇಲೆ ಎಲ್ಲಿ ಅಲ್ಲಲ್ಲಿ ಅಂದಾಜು ಪ್ಲಾನು ಆಗಿರುವುದನ್ನು ನೋಡಿ ಎಷ್ಟು ಕೆಲಸ ಎಲ್ಲಿ ತೆಗೆದುಕೊಳ್ಳಬೇಕೆಂಬುದನ್ನು ನಾವು ಅಧಿಕಾರಿಗಳಿಗೆ ಬಿಡುತ್ತೇವೆ.

ಶ್ರೀ ಚಿಕ್ಕೇಗೌಡ.—ಹಳೆಯ ಮೈಸೂರಿನಲ್ಲಿ ಬಹಳ ಕಡಮೆ ಮಿಡಿಯಂ ಮತ್ತು ಮೇಜರ್ ಕೆಲಸಗಳಿರುವುದರಿಂದ ಮೈನರ್ ಕೆಲಸ ಜಾಸ್ತಿ ತೆಗೆದುಕೊಳ್ಳಬೇಕು ಎಂಬುದನ್ನು ಒಪ್ಪುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಹೆಚ್ಚು ಕೆಲಸ ತೆಗೆದುಕೊಳ್ಳುವುದಕ್ಕೆ ಹಣ ಸಾಲುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಹೋದ ವರ್ಷ ಸುಮಾರು 3 ಕೋಟಿ ರೂಪಾಯಿ ಕೊಡುತ್ತೇವೆಂದು ಹೇಳಿ ಸಣ್ಣ ಕಾಂಗಾರಿಗಳಿಗೆ ಒಂದು ಕೋಟಿ ಕೊಡದಿರುವುದು ನಿಜವೆ ?

ಶ್ರೀ ವೀರೇಂದ್ರ ಪಾಟೀಲ್.—ಅದನ್ನು ಒಪ್ಪುವುದಕ್ಕಾಗುವುದಿಲ್ಲ, ಹೋದ ಸಲ 415 ಲಕ್ಷ ಮೈನರ್ ಇರಿಗೇಷನ್ನಿಗೆ ಖರ್ಚಾಗಿದೆ.

Sri H. C. LINGA REDDY.—May I know whether it is true that the Minor Irrigation Engineers have been submitting a number of works estimates for minor irrigation, but no action is taken by Government to sanction them ?

Sri VEERENDRA PATIL.—Just now I said that there are more than 3,000 works in progress. In order to complete these works we have to spend nearly Rs. 12 to 13 crores. Then we have got heavy spill-over works. Then how can we think of starting new works ? That is why we are reviewing the whole position to find out if it is possible for us to start new works. If it is possible to start new works in some cases, we will certainly consider.

QUESTIONS FOR ANSWER ON THE DAY

(but not taken up)

Payment of Salaries through Cheques

*Q.—193. Sri M. A. AMALORPAVAM (Bharathinagar).—

Will the Minister for Education be pleased to state :—

(*a*) whether Government proposes to make payment through cheques to the teachers of the aided schools ;

(*b*) if so, the action taken by them in this behalf ?

A.—Sri K. V. SHANKARA GOWDA (Minister for Education).—

(*a*) and (*b*) Yes. A proposal is under examination. This may be given effect to from the academic year 1967-68.

Primary School Buildings

*Q.—34. Sri B. GANGANNA (Kallambella).—

Will the Minister for Education be pleased to state :—

whether Government would provide funds for the construction of Primary School buildings in every village to encourage compulsory primary education in the State ?

A.—Sri K. V. SHANKARA GOWDA (Minister for Education).—

No. This is the responsibility of Taluk Development Boards. Government however will give assistance at the rate of Rs. 1,000 per room